# ಪ್ರಜಾಪ್ರಭುತ್ವ ಪ್ರಿಯರಿಗೊಂದು ಸವಾಲು

— ಡಾ|| ಸಿದ್ಧಯ್ಯ ಪುರಾಣಿಕ

ಮಂಡಲ ವರದಿಯನ್ನು ಆಧರಿಸಿ ಕೇಂದ್ರದ ರಾಷ್ಟ್ರೀಯರಂಗ ಸರಕಾರ ಹೊರಡಿಸಿದ್ದ ಆದೇಶವನ್ನು ನಮ್ಮ ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದ ಮೇಲೂ ಅದರ ವಿರುದ್ಧ ಅಲ್ಲಲ್ಲಿ ಹಿಂ ಸಾ ಚಾ ರ ಗ ಳು ನಡೆದಿರುವುದು ಶೋಚನೀಯವಾದುದು. ಹಿಂದೆ ಷಾ ಬಾನೂ ತೀರ್ಪಿನ ಸಂದರ್ಭದಲ್ಲಿಯೂ ಪ್ರತಿಭಟನೆ ನಡೆದುದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಇದು ಅತ್ಯಂತ ಆತಂಕಕಾರಿ ಬೆಳವಣಿಗೆ. ನ್ಯಾಯಾಂಗಕ್ಕೆ ನೀಡಬೇಕಾದ ಗೌರವವನ್ನು ನಾವು ನೀಡದಿದ್ದರೆ ಪ್ರಜಾಪ್ರಭುತ್ವಕ್ಕೆ ಉ ಳಿ ಗಾ ಲ ವಿ ಲ್ಲ. ಪ್ರಜಾಪ್ರಭುತ್ವ ಉಳಿಯದಿದ್ದರೆ ಅ ರಾ ಜ ಕ ತೆ ಯ ಅಟ್ಟಹಾಸ ಅಥವಾ ಸರ್ವಾಧಿಕಾರದ ವಿತಂಡ ತಾಂಡವ; ರಾಮ ಜನ್ಮಭೂಮಿಯಂಥ ಸಮಸ್ಯೆಗಳು ನ್ಯಾಯಾಂಗ ವ್ಯಾಪ್ತಿಗೆ ಒಳಪಡವೆಂಬ ವಾದ. ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಸಂವಿಧಾನದ ತಿದ್ದುಪಡಿಯ ಮೂಲಕ ರದ್ದುಪಡಿಸುವ ಬುದ್ಧಿಗೇಡಿತನ ಮತ್ತು ಹಿಂಸಾತ್ಮಕ ಪ್ರತಿಭಟನೆಗಳಿಂದ ಅದು ಬಿದ್ದು ಹೋಗುವಂತೆ ಮಾಡುವ ಪೆದ್ದತನ — ಎಲ್ಲವೂ ಪ್ರಜಾಪ್ರಭುತ್ವ ದ್ರೋಹೀ ಕೃತ್ಯಗಳೇ.

ನ್ಯಾಯದ ದೃಷ್ಟಿಯಲ್ಲಿ ಎಲ್ಲರೂ ಸಮಾನರೆಂಬುದೇ ಪ್ರಜಾತಂತ್ರದ ತಳಹದಿಯಾಗಿರುವಾಗ ಅದನ್ನು ದುರ್ಬಲಗೊಳಿಸುವ, ನಿಷ್ಕ್ರಿಯ ಗೊಳಿಸುವ ಯಾವ ಪ್ರಯತ್ನವನ್ನೂ ನಾವು ಪ್ರೋತ್ಸಾಹಿಸಬಾರದು. ಇವುಗಳನ್ನು ಸಾರ್ವಜನಿಕರು, ಸಮೂಹ ಮಾಧ್ಯಮಗಳು, ಬುದ್ಧಿ ಜೀವಿಗಳು ಉಗ್ರವಾಗಿ ಖಂಡಿಸಲೇಬೇಕು. ಬಲಿಷ್ಠರಿಗೊಂದು ನ್ಯಾಯ, ಬಲಹೀನರಿಗೊಂದು ನ್ಯಾಯ, ಉಳ್ಳವರಿಗೊಂದು ನ್ಯಾಯ, ಇಲ್ಲದವರಿಗೊಂದು ನ್ಯಾಯವಾದರೆ ಅದು ಅನ್ಯಾಯವೇ !

ಅಧ್ಯಕ್ಷ ನಿಕ್ಸನ್‌ರ ವಿಚಾರಣೆ ನಡೆದಾಗ ಅಮೇರಿಕೆಯ ಸುಪ್ರೀಂ ಕೋರ್ಟಿನ ನ್ಯಾಯಾಧೀಶರೆಲ್ಲರೂ ನಿಕ್ಸನ್‌ರಿಂದ ನಿಯುಕ್ತರಾದವರೇ ಆಗಿದ್ದರು. ಆದರೂ ಆ ನಿರ್ಭೀತ ನ್ಯಾಯಮೂರ್ತಿ ಗ ಳೆ ಲ್ಲಾ ಒಮ್ಮತದಿಂದ ನಿಕ್ಸನ್‌ರ ವಿರುದ್ಧ ತೀರ್ಪಿತ್ತರು. ನಿಕ್ಸನ್ ಅದನ್ನು ನಿರ್ವಿರೋಧವಾಗಿ ಒಪ್ಪಿಕೊಂಡರು. ಇಲ್ಲಿ ? ಪ್ರತಿಭಟನೆ, ಜೊಬ್ಬಾಟ, ಬಸ್ಸು ಸುಡುವುದು, ಬೆಂಕಿಯಿಡುವುದು, ಸ್ವದಹನ ಮಾ ಡಿ ಕೊ ಳ್ಳು ವು ದು, ಇನ್ನೂ ಏನೇನೋ !

ಇವುಗಳಿಗೆ ಅ ಪ ರೋ ಕ್ಷ ವಾ ಗಿ ಕುಮ್ಮಕ್ಕು ಕೊಡುವ ಕ್ರಿಮಿನಲ್ ನಾಯಕರು ಮತ್ತು ಇವುಗಳನ್ನು ನಿಸ್ಸಹಾಯಕರಂತೆ ನೋಡುತ್ತಾ ಕೂಡ್ರುವ ನಪುಂಸಕ ನಾಯಕರು — ಇಬ್ಬರೂ ಹೋಗಿ ನ್ಯಾಯನಿಷ್ಠುರ, ದಾಕ್ಷಿಣ್ಯರಹಿತ, ನೈತಿಕ ಧೈರ್ಯದ ನಾಯಕರು ಮುಂದೆ ಬರಬೇಕೀಗ. ಇದೀಗ ಈ ದೇಶದ ಪ್ರಜಾಪ್ರಭುತ್ವ ಪ್ರಿಯರು ಸ್ವೀಕರಿಸಬೇಕಾದ ಸವಾಲು.

"ಬಿತ್ತರ" ಕನ್ನಡ ವಿ. ವಿ. ಹಂಪಿ

---

( 24 ನೇ ಪುಟದಿಂದ ಬಂದದ್ದು )

ಬರೆಯುವ ಸಾಹಿತ್ಯ ಪದ್ಯವೇ ಇರಲಿ, ಗದ್ಯವೇ ಇರಲಿ, ಯಾವ ಶಬ್ದ ಎಲ್ಲಿ ಬರಬೇಕೋ ಅದು ಅಲ್ಲಿಯೇ ಬರಬೇಕು. ಲೇಖಕ ಎಂಥ ಚಮತ್ಕಾರ ಮಾಡಿದ್ದಾನೆನ್ನುವ ಭಾವನೆ ಓದುಗನಲ್ಲಿ ಬರಬೇಕು. ಬರವಣಿಗೆಯ ನಿಜವಾದ ಸಾರ್ಥಕತೆ ಅದರಲ್ಲಿಯೇ ಇದೆ.

---

ನಿಮ್ಮ ಪ್ರಾರ್ಥನೆಯು ಸಮಾನವಾಗಿರಲಿ, ನಿಮ್ಮ ಗುರಿಯು ಸಮಾನವಾಗಿರಲಿ, ನಿಮ್ಮ ಉ ದ್ದೇ ಶ ವು ಸಮಾನವಾಗಿರಲಿ, ನಿಮ್ಮ ವಿಚಾರಗಳು ಸಮಾನವಾಗಿರಲಿ, ನಿಮ್ಮ ಬಯಕೆಗಳು ಸಮಾನವಾಗಿರಲಿ, ನಿಮ್ಮ ಹೃದಯಗಳು ಐಕ್ಯತೆದಲ್ಲಿರಲಿ ನಿಮ್ಮ ಇಂಗಿತಗಳಲ್ಲಿ ಸಾಮರಸ್ಯವಿರಲಿ, ನಿಮ್ಮೊಳಗಿನ ಏಕತೆ ಪರಿಪೂರ್ಣವಾಗಿರಲಿ. — ಋಗ್ವೇದ

---

ಇಡೀ ಮಾನವಕುಲ ಒಂದು ಕುಟುಂಬ - ಒಂದು ಜನ ಎಲ್ಲರೂ ಸಹೋದರರು ಮತ್ತು ಹಾಗೆಯೇ ಜೀವಿಸಬೇಕು ಆ ರೀತಿ ಜೀವಿಸುವವರನ್ನು ದೇವರು ಪ್ರೀತಿಸುತ್ತಾನೆ. — ಇಸ್ಲಾಂ.

[ 21 ನೇ ಪುಟದಿಂದ ಬಂದದ್ದು ]

ಅನೇಕ ವಿದೇಶೀ ಸರಕಾರಗಳೆದುರು ಸಿದ್ಧಪಡಿಸ ಬೇಕಾಯಿತು. ದೇಶದಲ್ಲಿ ಕಾನೂನು ವ್ಯವಸ್ಥೆಯ ಪುನಃಸ್ಥಾಪನೆಗಾಗಿ, ಹಾಳಾದ ಆಸ್ತಿವಿತ್ತಗಳ ಪುನರ್ನಿರ್ಮಾಣಕ್ಕಾಗಿ, ಸತ್ತವರ — ಗಾಯಗೊಂಡವರ ಕುಟುಂಬದವರಿಗೆ ಪರಿಹಾರ ನೀಡುವದಕ್ಕಾಗಿ ಕೋಟ್ಯಾಂತರ ರೂಪಾಯಿ ವೆಚ್ಚವಾಗಿ ಸರಕಾರದ ಬೊಕ್ಕಸ ನರಳುವಂತಾಯಿತು. ಈ ಭಾರವನ್ನು ಸಾಮಾನ್ಯ ನಾಗರಿಕನೇ ಹೊರಬೇಕು. ಅವನು ಇದಕ್ಕಾಗಿ ಅಧಿಕ ತೆರಿಗೆ ಕೊಡಬೇಕು. ಮತ್ತು ಜೀವನಾವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ಸಹಿಸಬೇಕು. ಜನಕಲ್ಯಾಣ ಸಾಧನೆಯ ಪರಮ ಧ್ಯೇಯದಿಂದಲೇ ತಾವು ಅಧಿಕಾರಕ್ಕಾಗಿ ಹೋರಾಡುತ್ತಿರುವದಾಗಿ ಹೇಳಿಕೊಳ್ಳುವ ಎರಡೂ ಪಕ್ಷಗಳವರಿಗೆ ಇದರ ಪ್ರಜ್ಞೆಯೇ ಇಲ್ಲ. ಪ್ರತಿಯಾಗಿ ಇನ್ನೊಂದು ಸುತ್ತಿನ ಹೋರಾಟದ ಘೋಷಣೆ ಎರಡೂ ಬಣಗಳಲ್ಲಿ ಕೇಳಬರುತ್ತಲೇ ಇವೆ. ಇದೆಲ್ಲ ಚುನಾವಣೆಯ ರಂಗ ತಾಲೀಮು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಈ ರಂಗ ತಾಲೀಮು ನಿಲ್ಲತಕ್ಕದ್ದಲ್ಲ. ಮುಂದಿನ ಸುತ್ತಿನ ಹೋರಾಟಕ್ಕಾಗಿ ಸಾಮಾನ್ಯ ನಾಗರಿಕ ಇನ್ನೂ ಎಷ್ಟು ಬೆಲೆ ತೆರಬೇಕಾಗುತ್ತದೆಯೋ !

"ದೇವಗೆಂದು ಗುಡಿಯನೊಂದು ಕಟ್ಟುತಿರುವೆಯಾ ? ಬಡವಗೊಂದು ಗುಡಿ(ಸ)ಲು ಸಾಕು. ದೇವಗೊಂದು ಗುಡಿಯೆ ಬೇಕು" ಎಂದು ಕನ್ನಡದ ಸುಪ್ರಸಿದ್ಧ ಕವಿಯೊಬ್ಬರು ಹಾಡಿದರು. ಹಂಪೆಯ ವಿಜಯವಿಠ್ಠಲ ಮಂದಿರದಲ್ಲಿ ದೇವರ ಮೂರ್ತಿ ಇಲ್ಲ. ಅಲ್ಲಿ ನಿಲ್ಲಬೇಕಾಗಿದ್ದ ವಿಠ್ಠಲನು ತನಗಾಗಿ ವಿಜಯನಗರದ ಅರಸನು ನಿರ್ಮಿಸಿದ ರಾಜವೈಭವೋಪೇತ ಮಂದಿರವನ್ನು ನೋಡಿ, ಇದು ನನಗೆ ಯೋಗ್ಯ ಸ್ಥಾನವಲ್ಲ ಎಂದು ಹೇಳಿ ಹೊರಟು ಹೋದದ್ದೇ ಅದಕ್ಕೆ ಕಾರಣವೆಂದು ಹೇಳುತ್ತಾರೆ. ಇಂಥ ಪರಂಪರೆಯ ನಾವು ಇಂದು ಬಡವನಿಗೆ ಗುಡಿಸಲು ಕಟ್ಟುವದನ್ನು ಮರೆತ ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ ಭವ್ಯ ದಿವ್ಯ ಮಂದಿರವೊಂದನ್ನು ನಿರ್ಮಾಣ ಮಾಡ ಹೊರಟಿದ್ದೇವೆ. ಹಾಳಾದ ಮಸೀದೆಯನ್ನು ಪುನರ್ನಿರ್ಮಿಸಲು ಮತ್ತು ಹೊಸ ರಾಮ ಮಂದಿರವನ್ನು ಕಟ್ಟಲು ಕೋಟಿ ಕೋಟಿ ರೂಪಾಯಿ ವೆಚ್ಚ ಮಾಡಲು ಸಿದ್ಧವೆಂದು ನಮ್ಮ ಜಾತ್ಯತೀತ ಸರಕಾರ ಘೋಷಿಸಿದೆ. ಹೀಗೆ ದ್ವೇಷ ಮತ್ಸರಗಳ ಉರಿಯಲ್ಲಿ ಹುರಿದು. ಅಹಂಕಾರ ವೈಭವಗಳ ಬೆಂಕಿಯಲ್ಲಿ ಬೆಂದು ಸೋಲು ಗೆಲವುಗಳ ವಿಕಲಾಟ್ಟಹಾಸದಲ್ಲಿ ಮೆರೆಯುವ ಈ ಮಸೀದೆಯಲ್ಲಿ ನಡೆಸಿದ ಪ್ರಾರ್ಥನೆ ದೇವರಿಗೆ ಮುಟ್ಟೀತೆ ? ಈ ಮಂದಿರದಲ್ಲಿ ಸಲ್ಲಿಸಿದ ಪೂಜೆ ದೇವರಿಗೆ ಸಂದೀತೆ ? ಇಂಥ ಪ್ರಶ್ನೆ ಯಾರಿಗೂ ಮುಖ್ಯವಲ್ಲ. ತಮ್ಮ ಪಕ್ಷದ ಪ್ರತಿಷ್ಠೆ ಮತ್ತು ಅಧಿಕಾರದ ಭದ್ರತೆ ಇವುಗಳ ಪಾಲನೆ ಪೋಷಣೆಗೆ ಸಂಬಂಧಿಸಿದ ಪ್ರಶ್ನೆಗಳ ಮುಂದೆ ಉಳಿದೆಲ್ಲ ಅಂಶಗಳು ತೀರ ಗೌಣ.

ಅನೇಕ ಸಾಧು ಸಂತರು, ಸನ್ಯಾಸಿಗಳು, ಧರ್ಮಪೀಠಾಧಿಪತಿಗಳು ಈ ಸಮಸ್ಯೆಯಲ್ಲಿ ತೋರಿಸುತ್ತಿರುವ ಆಸ್ಥೆ ಇನ್ನೂ ಕುತೂಹಲಕಾರಿಯಾಗಿದೆ. ಸರ್ವಸಂಗ ಪರಿತ್ಯಾಗಿಗಳೂ ರಾಗದ್ವೇಷಾದಿಗಳಿಗೆ ಅತೀತರೂ ಲೌಕಿಕ ಜೀವನ ಪರಿತ್ಯಕ್ತರೂ ಆದ ಈ ವರ್ಗ ಮಂದಿರ ಮಸೀದೆ ಸಮಸ್ಯೆಯಲ್ಲಿ ತೋರಿಸುತ್ತಿರುವ ಕೋಪಾಟೋಪ, ರೋಷಾವೇಶ, ಅತ್ಯಂತ ವಿಸ್ಮಯಜನಕವಾಗಿವೆ. ಮಸೀದೆಯನ್ನು ಕೆಡವಿ ಕಟ್ಟಿದ ಗುಡಿಯಲ್ಲೇ ಭಗವಂತನ ಆವಾಸ ಇರುತ್ತದೆ ಎಂಬ ಭರವಸೆಯನ್ನು ಇದರು ನೀಡಬಲ್ಲರೆ ? ಅದೇ ದೇವಸ್ಥಾನವನ್ನು ಬೇರೆ ಕಡೆಯಲ್ಲಿ ಕಟ್ಟಿದರೆ ಅಲ್ಲಿ ದೇವರ ಸಾನ್ನಿಧ್ಯ ಇರಲಾರದೆಂದು ಇವರು ಸಿದ್ಧ ಮಾಡಬಲ್ಲರೆ ? ದೇವರು ಸರ್ವವ್ಯಾಪಿಯೆಂದೂ ಮೂರ್ತಿ ಮಂದಿರಗಳಲ್ಲಿ ಮಾತ್ರ ಇರುವದಿಲ್ಲವೆಂದೂ ಹೇಳುವವರೇ ಮಂದಿರವೊಂದಕ್ಕಾಗಿ ಹಿಂಸೆ, ರಕ್ತಪಾತಗಳನ್ನು ಪ್ರಚೋದಿಸುತ್ತಿರುವದು ಎಂಥ ವಿಪರ್ಯಾಸ ?

ನಮ್ಮ ದೇಶದಲ್ಲಿ ಬಡತನ ತಾಂಡವವಾಡುತ್ತಿದೆ. ನಿತ್ಯಜೀವನ ವಸ್ತುಗಳ ಬೆಲೆಗಳು ಗಗನಕ್ಕೇರುತ್ತಿವೆ. ನಿರುದ್ಯೋಗತನ ಬೆಳೆಯುತ್ತಿದೆ. ತೆರಿಗೆ ಗಳ್ಳತನ, ಕಳ್ಳಪೇಟೆ, ವಸ್ತುಗಳ ಕೃತಕ ಅಭಾವ, ಲಂಚಗುಳಿತನ, ಭ್ರಷ್ಟಾಚಾರ, ಇತ್ಯಾದಿ ಶ್ರೀಸಾಮಾನ್ಯನ ಜೀವನವನ್ನು ಹಿಂಡಿಹಿಪ್ಪೆ ಮಾಡುತ್ತಿದೆ. ಆದರೂ ಇವುಗಳ ಬಗ್ಗೆ ನಮ್ಮಲ್ಲಿ ಸುಸಂಘಟಿತ ಪ್ರತಿಭಟನೆಯಾಗಲಿ. ವಿರೋಧವಾಗಲಿ, ಎಳ್ಳಷ್ಟೂ ಕಂಡು ಬರುವದಿಲ್ಲ. ಮಂದಿರಕ್ಕೋ ಮಸೀದೆಗೋ "ಗುಂಡೇಟಿಗೆ" ಎದೆಯೊಡ್ಡಲು ಸಿದ್ಧವಾಗುವವರು ದೈನಂದಿನ ಜೀವನದ ಸಮಸ್ಯೆಗಳಿಂದ ಏಕೆ ವಿಚಲಿತರಾಗುವದಿಲ್ಲ ?

ನಮ್ಮ ಸಾಮಾಜಿಕ ಮತ್ತು ರಾಜಕೀಯ ಜೀವನ ಹೀಗೇಕೆ ಆಗಿದೆ ? ಇದೇ ದಿಸೆಯಲ್ಲಿ ಹೊರಟರೆ ನಾವು ತಲುಪುವದೆಲ್ಲಿಗೆ ? ಚಿಂತನಶೀಲರಾದವರು ಗಂಭೀರವಾಗಿ ಆಲೋಚಿಸಬೇಕಾದ ವಿಷಯವಿದು. ✱ ✱ ✱